ವಿಷಯ:- ಬಸವಕಲ್ಯಾಣದಲ್ಲಿ ರಸ್ತೆ ಡಾಂಬರೀಕರಣ.

110(571)

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):- ಮಾನ್ಯ ಲೋಕೋಪಯೋಗಿ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಬಸವಕಲ್ಯಾಣದ ಅವರಿನಮನೆ, ಅಕ್ಕನಾಗಮ್ಮನ ಗವಿ, ಪೋಳಗಿ, ಮಾರೇನ ಹೊಂಡ, ಮಾಚೀದೇವರಗುಡ್ಡ, ಅನುಭವ ಮಂಟಪ ರಸ್ತೆಗಳು ಪೂರ್ತಿಹಾಳಾಗಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಶೀಘ್ರವಾಗಿ ಈ ರಸ್ತೆಗಳಿಗೆ ಡಾಂಬರೀಕರಣ ಮಾಡಲಾಗುವುದೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಮಂತ್ರಿಗಳು):-

ಅ) ಹೌದು

ಆ) ಅನುದಾನ ಲಭ್ಯತೆಗನುಗುಣವಾಗಿ ಡಾಂಬರೀಕರಣ ಕೈಗೊಳ್ಳಲಾಗುವುದು.

ವಿಷಯ:- ವಿಜಾಪುರ ಜಿಲ್ಲೆಯ ಅಗರ್‌ಖೆಡ್ ಸೇತುವೆ ಕುರಿತು.

111(240)

ಶ್ರೀ ಬಸನಗೌಡ ರಾ. ಪಾಟೀಲ್ (ವಿಜಾಪುರ):- ಮಾನ್ಯ ಲೋಕೋಪಯೋಗಿ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಬಿಜಾಪುರ ಜಿಲ್ಲೆಯ ಹಿಂಡಿ ತಾಲ್ಲೂಕಿನಲ್ಲಿ ನಿರ್ಮಿಸಲಾಗುತ್ತಿರುವ ಭೀಮಾ ನದಿಗೆ ಅಡ್ಡಲಾಗಿ ಅಂತರ ರಾಜ್ಯ ರಸ್ತೆ ಜೋಡಣೆಯ ಅಗರ್‌ಖೆಡ್ ಸಮೀಪವಿರುವ ಸೇತುವೆಯ ಕಾಮಗಾರಿ ಸ್ಥಗಿತಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಈ ಕಾಮಗಾರಿಗೆ ಎಂದು ಮಂಜೂರಾತಿ ದೊರೆತಿದೆ? ಸದರಿ ಕಾಮಗಾರಿ ಯಾವ ಹಂತದಲ್ಲಿದೆ? ಈ ಕಾಮಗಾರಿಯ ವಿಳಂಬಕ್ಕೆ ಕಾರಣಗಳೇನು;

ಇ) ಸರ್ಕಾರವು ನಿಗದಿಪಡಿಸಿದ ಅಂದಾಜು ವೆಚ್ಚಕ್ಕಿಂತ ಈಗ ಅಂದಾಜು ವ್ಯತ್ಯಾಸವಾಗಿರುವುದರಿಂದ ಗುತ್ತಿಗೆದಾರರು ಕಾಮಗಾರಿ ಪೂರ್ಣಗೊಳಿಸಲು ವಿಳಂಬ ಮಾಡುತ್ತಿರುವುದು ನಿಜವೇ? ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಹೌದು.

ಆ) ಈ ಸೇತುವೆ ನಿರ್ಮಾಣ ಕಾಮಗಾರಿಗಾಗಿ ಕೇಂದ್ರ ಸರ್ಕಾರದಿಂದ ಆರ್ಥಿಕ ಪ್ರಾಮುಖ್ಯತೆ ಯೋಜನೆ ಅಡಿಯಲ್ಲಿ ದಿನಾಂಕ 7-11-1984ರಲ್ಲಿ ಮಂಜೂರಾತಿ ದೊರೆತಿದೆ. ರಾಜ್ಯ ಸರ್ಕಾರದಿಂದ 120.00 ಲಕ್ಷ ರೂ.ಗಳಿಗೆ ಆಡಳಿತಾತ್ಮಕ ಮಂಜೂರಾತಿ ದಿನಾಂಕ 15-3-1985 ರಲ್ಲಿ ದೊರೆತಿದ್ದು

ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ, ಬೆಂಗಳೂರುರವರು ದಿನಾಂಕ 15-11-1985ರಲ್ಲಿ 127.27 ಲಕ್ಷ ರೂ.ಗಳಿಗೆ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಕಾಮಗಾರಿ ಹಂತ:-

ಈ ಸೇತುವೆ ಕಾಮಗಾರಿಯು 25 ಮೀ. ಆಗಲ ಉಳ್ಳ 17 ಸ್ಪ್ಯಾನ್‌ಗಳನ್ನು ಒಳಗೊಂಡಿದ್ದು ಒಂದು ಗುದ್ದು ಕಂಬ ಹಾಗೂ ಒಂದು ಭಾಗಶ: ನಡು ಕಂಬವನ್ನು ಬಿಟ್ಟು ಉಳಿದ ಎಲ್ಲಾ ಕೆಳ ಕಟ್ಟಡಗಳು (ಸಬ್‌ಸ್ಟ್ರಕ್ಚರ್) ಮುಗಿದಿರುತ್ತದೆ. ಸೇತುವೆಯ ಮೇಲ್ಭಾವಣೆ (ಸೂಪರ್‌ಸ್ಟ್ರಕ್ಚರ್) ಕಾಮಗಾರಿಯನ್ನು ಕೈಗೊಳ್ಳಬೇಕಾಗಿರುತ್ತದೆ.

ಈ ಕಾಮಗಾರಿಯು ಗುತ್ತಿಗೆದಾರರ ಸ್ವಂತ ವಿನ್ಯಾಸ ಹೊಂದಿದ್ದು, ಕೇಂದ್ರ ಭೂಸಾರಿಗೆ ಮಂತ್ರಾಲಯದ ಒಪ್ಪಿಗೆ ಪಡೆಯುವಲ್ಲಿ ವಿಳಂಬವಾಗಿದೆ. ಇದಲ್ಲದೆ ಗುದ್ದು ಕಂಬಗಳ ಪಾಯವನ್ನು ಬಾವಿ ವಿನ್ಯಾಸದಿಂದ ತೆರೆದ ವಿನ್ಯಾಸಕ್ಕೆ ಬದಲಾಯಿಸಿದ್ದರಿಂದಲೂ ವಿಳಂಬವಾಗಿದೆ.

ಇ) ಗುತ್ತಿಗೆದಾರರು ಸಲ್ಲಿಸಿದ ಇಡುಗಂಟಿನ ಗುತ್ತಿಗೆಯನ್ನು ಇಲಾಖೆಯು 1987ರಲ್ಲಿ ಒಪ್ಪಿಕೊಂಡಿದ್ದು, ಈಗಾಗಲೇ ಆಗಿರುವ ವಿಳಂಬದಿಂದ ಸೇತುವೆ ನಿರ್ಮಾಣದ ಸಾಮಗ್ರಿಗಳು, ಕೂಲಿ ದರಗಳು ಮತ್ತು ಇತರೆ ದರಗಳಿಗೂ ಬಹಳಷ್ಟು ಹೆಚ್ಚಾಗಿರುವುದರಿಂದ ಆ ಮೊತ್ತಕ್ಕೆ ಕಾಮಗಾರಿಯನ್ನು ಮುಂದುವರೆಸಲು ಸಾಧ್ಯವಿಲ್ಲವೆಂದು ಮನವಿಯನ್ನು ಸಲ್ಲಿಸಿ ಬಾಕಿ ಉಳಿದಿರುವ ಗುದ್ದು ಕಂಬದ ಕೆಲಸಗಳಿಗೆ 1994-95ನೇ ವರ್ಷದ ದರಪಟ್ಟಿ ದರಗಳು ಮತ್ತು ಹೆಚ್ಚಿನ ಗುತ್ತಿಗೆ ಶೇಕಡಾವಾರನ್ನು ಹಾಗೂ ಸೇತುವೆಯ ಮೇಲ್ಭಾವಣಿಗೆ (ಸೂಪರ್‌ಸ್ಟ್ರಕ್ಚರ್) 1995-96ರ ದರಪಟ್ಟಿ ದರಗಳನ್ನು ನೀಡಲು ಮನವಿ ಸಲ್ಲಿಸಿರುತ್ತಾರೆ.

ಉಳಿಕೆ ಕಾಮಗಾರಿಗೆ 96-97ನೇ ಸಾಲಿನ ದರಗಳನ್ನು ಅಳವಡಿಸಿ 352.39 ಲಕ್ಷ ರೂ.ಗಳಿಗೆ (ಕೂಡು ರಸ್ತೆಯು ಸೇರಿ) ಅಂದಾಜು ಪಟ್ಟಿಯನ್ನು ತಯಾರಿಸಿ ಈ ಕಾಮಗಾರಿಯ ವೆಚ್ಚವನ್ನು ನಬಾರ್ಡ್ ಸಾಲದ ನೆರವಿನ ಯೋಜನೆ ಅಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ. ಅನುಮೋದನೆಯಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ವಿಷಯ:- ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಘಾತಗಳ ಕುರಿತು.

112(259)

ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ):- ಮಾನ್ಯ ಲೋಕೋಪಯೋಗಿ ಮಂತ್ರಿಗಳು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ದಿನಾಂಕ 1-1-1996 ರಿಂದ ಇಲ್ಲಿಯವರೆಗೆ ಬೆಂಗಳೂರು ರಸ್ತೆ ತುಮಕೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಎಷ್ಟು ಅಪಘಾತಗಳು ಸಂಭವಿಸಿರುತ್ತದೆ;